ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ನ್ಯಾಯಾಲಯ, ಹುಬ್ಬಳ್ಳಿ

## ಸಿ.ಸಿ.ನಂ.8563/2024

ಫಿರ್ಯಾದಿ : ಶ್ರೀ ಗೋಕುಲ ಚಿಟ್ ಆ್ಯಂಡ ಫೈನಾನ್ಸ ಕಂಪನಿ
ಪ್ರೈವೆಟ್ ಲಿ., ಸಾಃ ನಂಃ66, ಅರಕೋಟ ರೋಡ,
ಕೋಡಂಬಕಂ. ಪ್ರತಿನಿಧಿಸುವವರು ಬ್ಯಾಂಚ್ ಮ್ಯಾನೇಜರ್
ಕೃಷ್ಣಮೂರ್ತಿ ಡಿ ಟಿ ತಂದೆ ತಿಮ್ಮೆಗೌಡ ಡಿ ಟಿ
ಹುಬ್ಬಳ್ಳಿ.

ವಿರುದ್ಧ

ಆರೋಪಿ : ಶ್ರೀ ಸೈಯದಅಹ್ಮದ ಹಜರೇಸಾಬ ಕೊಲ್ಲಾಪುರಿ,
ವಯಾಃ53 ವರ್ಷ, ಉಃ ವ್ಯವಹಾರ,
ಸಾಃ ನಂಃ 37 ಸಿದ್ಧರೂಡನಗರ, ಹುಬ್ಬಳ್ಳಿ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆಗಳು**

ಪ್ರಃ1 ಈ ಪ್ರಕರಣದಲ್ಲಿರುವ ಸಾಕ್ಷಿಯ ಸಾಕ್ಷ್ಯಗಳನ್ನು ಕೇಳಿರುವಿರಾ?

ಉತ್ತರಃ

ಪ್ರಶ್ನೆಃ2 ಪ್ರಾಸಾಃ 1 ಶ್ರೀ ಕೃಷ್ಣಮೂರ್ತಿ ಟಿಡಿ ತಂದೆ ತಿಮ್ಮೆಗೌಡ ಡಿ ಟಿ, ಮ್ಯಾನೇಜರ್ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಪಿರ್ಯದುದಾರರ ಕಂಪನಿಯ ಟಿಕೆಟ್ ಸಂಖ್ಯೆ "ಜಿ2 ಎಫ್/0854/ಎಮ್ಎಸ್ಆರ್/19 ಹೊಂದಿದ್ದು, ಪಿರ್ಯಾದುದಾರರ ಕಂಪನಿಯ ಬಿಡ್ಡಿಂಗನಲ್ಲಿ ಪಾಲ್ಗೊಂಡು ನೀವು ಹಣವನ್ನು ಸ್ವಂತಕ್ಕೆ ಬಳಸಿಕೊಂಡಿದ್ದು, ಸದರಿ ಮೊತ್ತವನ್ನು ಮರುಪಾವತಿಸಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳುವುದಿದೆಯೇ?

ಉತ್ತರಃ

ಪ್ರಃ3ಃ ಪ್ರಾಸಾ ಃ1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ಮೊತ್ತವನ್ನು ಮರುಪಾವತಿಸಲು ನೀವು , ರೂ.248,094/- ಮೌಲ್ಯದ ಒಂದು ಚೆಕ್ ಸಂಖ್ಯೆಃ 250038 ದಿನಾಂಕಃ 27.05.2024 ಎಂದು ನಮೂದಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹುಬ್ಬಳ್ಳಿ ಶಾಖೆಯ ಚೆಕ್ಕನ್ನು ಪಿರ್ಯಾದುದಾರರಿಗೆ ನೀವು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಾ?

ಉತ್ತರಃ

ಪ್ರಶ್ನೆ.4. ಪ್ರಾಸಾ.1 ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಸದರಿ ಚೆಕ್ಕನ್ನು ಫಿರ್ಯಾದುದಾರರು ತಮ್ಮ ಬಾಬ್ತು ಫೆಡರಲ್ ಬ್ಯಾಂಕ ಲಿ ಹುಬ್ಬಳ್ಳಿ ಶಾಖೆಯಲ್ಲಿ ನಗದೀಕರಣಕ್ಕೆ ಹಾಜರುಪಡಿಸಿದಾಗ "ಸಾಕಷ್ಟು ಹಣ ಇಲ್ಲ" ಎಂಬ ಷರಾದೊಂದಿಗೆ ದಿ. 28.05.2024 ರಂದು ಬ್ಯಾಂಕನವರು ಹಿಂಬರಹವನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಾ?

ಉತ್ತರಃ

ಪ್ರಃ5 ಪ್ರಾಸಾ.1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ನಿಟ್ಟಿನಲ್ಲಿ ಹಣ ಮರುಪಾವತಿಗಾಗಿ ವಕೀಲರ ಮುಖಾಂತರ ನಿಮಗೆ ಕಾನೂನು ರೀತ್ಯಾ ಸೂಚನಾ ಪತ್ರವನ್ನು ನೊಂದಾಯಿತ ಅಂಚೆಯ ಮುಖಾಂತರ ದಿನಾಂಕ 12.06.2024 ರಂದು ಕಳುಹಿಸಿದ್ದು, ನೀವು ಹಣವನ್ನು ಮರುಪಾವತಿಸಿರುವುದಿಲ್ಲ. ಹಾಗಾಗಿ ವರ್ಗಾವಣೆ ಲಿಖಿತಗಳ ಅಧಿನಿಯಮ ದಡಿಯಲ್ಲಿ ಮಾಡಿದ ಅಪರಾಧಕ್ಕೆ ಪಿರ್ಯಾದುದಾರ ಪ್ರಕರಣ ದಾಖಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಾ?

ಉತ್ತರಃ

ಪ್ರಃ6 ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೇ? ಅವರ ವಿಚಾರಣೆ ಮಾಡುವಿರಾ?

ಉತ್ತರಃ

ಪ್ರಃ7 ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೆಯೇ?

ಉತ್ತರಃ

(ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಅವನಿಗೆ ತಿಳಿಯುವ ಕನ್ನಡ ಭಾಷಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನು ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು)

ಸ್ಥಳಃ ಹುಬ್ಬಳ್ಳಿ
ದಿಃ 06.08.2025

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹುಬ್ಬಳ್ಳಿ